| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 54 ]
Total No. of Questions : 54 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24
[ Total No. of Printed Pages : 24

**ಸಂಕೇತ ಸಂಖ್ಯೆ : 33-K**
**Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ
# Subject : Second Language — KANNADA

ದಿನಾಂಕ : 05. 04. 2013 ]
ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ]
ಪರಮಾವಧಿ ಅಂಕಗಳು : 100 ]

[ Date : 05. 04. 2013
[ Time : 9-30 A.M. to 12-15 P.M
[ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 12. | | 23. | | 34. | | 45. | |
| 2. | | 13. | | 24. | | 35. | | 46. | |
| 3. | | 14. | | 25. | | 36. | | 47. | |
| 4. | | 15. | | 26. | | 37. | | 48. | |
| 5. | | 16. | | 27. | | 38. | | 49. | |
| 6. | | 17. | | 28. | | 39. | | 50. | |
| 7. | | 18. | | 29. | | 40. | | 51. | |
| 8. | | 19. | | 30. | | 41. | | 52. | |
| 9. | | 20. | | 31. | | 42. | | 53. | |
| 10. | | 21. | | 32. | | 43. | | 54. | |
| 11. | | 22. | | 33. | | 44. | | × | |
| | | | | | | | | ***Total Marks*** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಿ, ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ :

$15 \times 1 = 15$

1. 'ಸಿಂಹ' — ಈ ಪದದ ತದ್ಭವ ರೂಪ

(ಎ) ಸಿಂಗ (ಬಿ) ಸಿಂಹಿಣಿ

(ಸಿ) ಸಿಂಹರ (ಡಿ) ಸಿಂಹಳ

*ಉತ್ತರ :* ____________________

2. ಈ ಕೆಳಗಿನ ಪದಗಳಲ್ಲಿ ಶುದ್ಧರೂಪ ಯಾವುದು ?

(ಎ) ಅಹ್ರತೆ (ಬಿ) ಅರ್ಹತೆ

(ಸಿ) ಅಹರ್ತೆ (ಡಿ) ಅರಹತೆ

*ಉತ್ತರ :* ____________________

3. ಇದು ಉತ್ತಮ ಪುರುಷ ಸರ್ವನಾಮಪದವಾಗಿದೆ

(ಎ) ನಾನು (ಬಿ) ಅದು

(ಸಿ) ನೀನು (ಡಿ) ಅವನು

*ಉತ್ತರ :* ______________________________

4. ಕೇಳಿಕೇಳಿ — ಈ ಪದವು ಯಾವ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ ?

(ಎ) ಅನುಕರಣಾವ್ಯಯ (ಬಿ) ಜೋಡಿನುಡಿ

(ಸಿ) ದ್ವಿರುಕ್ತಿ (ಡಿ) ಸಂಧಿ

*ಉತ್ತರ :* ______________________________

5. ಇನ್ನೆಲ್ಲಿ — ಈ ಪದದಲ್ಲಿ ನಡೆದಿರುವ ಸಂಧಿಕಾರ್ಯ ಯಾವುದು ?

(ಎ) ಆದೇಶ ಸಂಧಿ (ಬಿ) ಆಗಮ ಸಂಧಿ

(ಸಿ) ಗುಣ ಸಂಧಿ (ಡಿ) ಲೋಪ ಸಂಧಿ

*ಉತ್ತರ :* ______________________________

6. ಹಿಮಾಲಯಕ್ಕೆ — ಈ ಪದದಲ್ಲಿರುವ ವಿಭಕ್ತಿ

(ಎ) ಪ್ರಥಮಾ (ಬಿ) ತೃತೀಯಾ

(ಸಿ) ಚತುರ್ಥೀ (ಡಿ) ಸಪ್ತಮೀ

*ಉತ್ತರ :* ______________________________

7. 'ದುರ್ದೈವ' — ಪದದ ವಿರುದ್ಧಾರ್ಥಕ ರೂಪ

(ಎ) ಪರದೈವ (ಬಿ) ಸುದೈವ

(ಸಿ) ದೈವ (ಡಿ) ದುರದೈವ

*ಉತ್ತರ :* ______________________________

8. 'ಥಳಥಳ' — ಈ ಪದವು ಯಾವ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ ?

(ಎ) ದ್ವಿರುಕ್ತಿ (ಬಿ) ಅನುಕರಣಾವ್ಯಯ

(ಸಿ) ಪಡೆನುಡಿ (ಡಿ) ಸರ್ವನಾಮ

ಉತ್ತರ : __________

9. 'ನಿರ್ದೇಶಕಿ' — ಈ ಪದದ ಪುಲ್ಲಿಂಗ ರೂಪವಿದು

(ಎ) ನಿರ್ದೇಶನ (ಬಿ) ನಾಯಕ

(ಸಿ) ಮಾರ್ಗದರ್ಶಕ (ಡಿ) ನಿರ್ದೇಶಕ

ಉತ್ತರ : __________

10. ರಾಮಚಂದ್ರರಾಯರು <u>'ಸ್ವದೇಶಿ ಚಳುವಳಿ'</u> ಯನ್ನು ಆರಂಭಿಸಿದರು. ಅಡಿಗೆರೆ ಎಳೆದ ಪದದಲ್ಲಿರುವ ಲೇಖನ ಚಿಹ್ನೆ ಯಾವುದು ?

(ಎ) ಆವರಣ (ಬಿ) ಅನಾವರಣ

(ಸಿ) ವಿವರಣ (ಡಿ) ಉದ್ಧರಣ

ಉತ್ತರ : __________

11. 'ಕಾಡು' — ಈ ಪದದ ಸಮಾನಾರ್ಥಕ ರೂಪ

(ಎ) ಅರಣ್ಯ (ಬಿ) ಹಿರಣ್ಯ

(ಸಿ) ನಾಡು (ಡಿ) ತೋಡು

ಉತ್ತರ : __________

12. 'ಆಡಿದನು — ಈ ಪದದ ಭವಿಷ್ಯತ್ಕಾಲ ರೂಪ

(ಎ) ಆಡು (ಬಿ) ಆಡುತ್ತಿರುವನು

(ಸಿ) ಆಡುವನು (ಡಿ) ಆಡನು

ಉತ್ತರ : __________

13. 'ಅವ್ವೆ' — ಈ ಪದದ ಗ್ರಾಂಥಿಕ ರೂಪ

(ಎ) ಅವ್ವೆ (ಬಿ) ಅವಳೆ

(ಸಿ) ಅಮ್ಮ (ಡಿ) ಅವಳು

ಉತ್ತರ : __________

14. ಈ ಪದಗಳಲ್ಲಿ ಅನ್ಯದೇಶೀಯಪದ ಯಾವುದು ?

(ಎ) ಕಾರ್ಡು (ಬಿ) ಕವಿ

(ಸಿ) ನಾಡು (ಡಿ) ಮಗ

*ಉತ್ತರ :* __________

15. 'ಕೋಗಿಲೆ' — ಈ ಪದದ ಬಹುವಚನ ರೂಪವಿದು

(ಎ) ಕೋಗಿಲೆಯರು (ಬಿ) ಕೋಗಿಲೆಗಳು

(ಸಿ) ಕೋಗಿಲೆರು (ಡಿ) ಕೋಗಿಲೆಯಂದಿರು

*ಉತ್ತರ :* __________

16. ಈ ಕೆಳಗಿನ **'ಮ'** ಪಟ್ಟಿಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು **'ಚ'** ಪಟ್ಟಿಯಿಂದ ಕ್ರಮಾಕ್ಷರದೊಂದಿಗೆ ಆರಿಸಿ, ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿ ಬರೆಯಿರಿ : 5 × 1 = 5

| ***ಮ*** | | ***ಚ*** |
|---|---|---|
| i) ರೂಪಕಾಲಂಕಾರ | ಅ) | ಆರು ಸಾಲುಗಳು |
| ii) ನುಡಿಗಟ್ಟು | ಆ) | ತಿನ್ನು |
| iii) ಷಟ್ಪದಿ | ಇ) | ಕರಗದ |
| iv) ಧಾತು | ಈ) | ವಿಮಲಧರ್ಮದ ವಾಣಿ |
| v) ನಿಷೇಧಾರ್ಥಕ | ಉ) | ಕಬ್ಬಿಣದ ಕಡಲೆ |
| | ಊ) | ಹಣ್ಣುಹಂಪಲು |
| | ಋ) | ನೋಡಿದನು |
| | ಎ) | ನಾಲ್ಕು ಸಾಲುಗಳು |

*ಉತ್ತರಗಳು :* i) __________

ii) __________

iii) __________

iv) __________

v) __________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

17. ದೇವತೆಯು ಭರತಕುಮಾರನಿಗೆ ........................................................................ ಕೊಟ್ಟಿತು.

18. ತಿರುಮಕೂಡಲು ನರಸೀಪುರದ ತೋಪಿನಲ್ಲಿ .................................................. ಯರ ಸಮ್ಮೇಳನ ನಡೆಯಿತು.

19. ಮಡಿಯ ನುಸುಳಾಟದಲ್ಲಿ ಶಾಸ್ತ್ರಿಗಳ ಸೊಸೆಯು .................................................. ಗಿಂತ ಹೆಚ್ಚಿನ ಚಪಲತೆ ತೋರುತ್ತಿದ್ದಳು.

20. ಬಡವರ ಜೀವನ ........................................................................ ಸ್ವತ್ತು.

21. ಹಡಗು ........................................................................ ವೇಗದಲ್ಲಿ ಚಲಿಸುತ್ತದೆ.

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ : $8 \times 1 = 8$

22. ಕೃಷ್ಣದೇವರಾಯನೊಡನೆ ಪಗಡೆಯಾಟ ಆಡುತ್ತಿದ್ದವರು ಯಾರು ?

23. ಹಿಂದಿ ಉಪಭಾಷೆ ಬುಂದೇಲಿಯಲ್ಲಿ ಪ್ರಯೋಗವಾದ ನಾಟಕ ಯಾವುದು ?

24. ತಗಡೂರು ರಾಮಚಂದ್ರರಾಯರ ಉಡುಪು ಯಾವುದನ್ನು ಪ್ರತಿನಿಧಿಸುತ್ತಿದ್ದಿತು ?

25. ಕಾಡುಮಿಕಗಳು ಹಳ್ಳದ ಬಳಿ ಏಕೆ ಬಂದವು ?

26. ಗಂಡ ಹೆಂಡತಿ ಮಕ್ಕಳು ಎಲ್ಲಿಗೆ ಹೋದರೆಂದು ಮೊಗಸಾಲೆಯವರು ಹೇಳಿದ್ದಾರೆ ?

27. ಹಡಗವು ಎಷ್ಟು ಭಾಷೆಗಳ ನವಖಂಡ ?

28. ಏಕೋಭಾವದಿಂದ ಯಾರನ್ನು ಭಜಿಸಬೇಕೆಂದು ಪುರಂದರದಾಸರು ತಿಳಿಸಿದ್ದಾರೆ ?

29. ಭರತ ಭೂತಳಕ್ಕೆ ಸಿಂಗಾರವಾದ ನಗರ ಯಾವುದು ?

ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $12 \times 2 = 24$

30. ಭರತಕುಮಾರನಿಗೆ ಸೂರ್ಯದೇವ ಮಾಡಿದ ಸಹಾಯವೇನು ?

31. ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿದ್ದು ಏಕೆ ?

32. ತಗಡೂರು ರಾಮಚಂದ್ರರಾಯರ ಸಾಂಸಾರಿಕ ಬದುಕನ್ನು ಕುರಿತು ಬರೆಯಿರಿ.

33. 'ಮಳೆಕೊಯ್ಲಿನ ಉಪಯೋಗವನ್ನು ಯಾರ್ಯಾರು ಹೇಗೆ ಪಡೆದಿದ್ದಾರೆ' ? ಎಂದು ಶೇಖರ ಹೇಳಿದನು.

34. ಮಳೆನೀರು ಭೂಮಿಯೊಳಕ್ಕೆ ಇಳಿಯುವುದು ಕಡಿಮೆಯಾಗುತ್ತಿದೆ ಏಕೆ ?

35. ಶಾಸ್ತ್ರಿಗಳ ಮುಖದಲ್ಲಿ ಹೊಗೆ ಮುಸುಕಲು ಕಾರಣವೇನು ?

36. ಹೆಚ್.ಎಸ್. ವೆಂಕಟೇಶಮೂರ್ತಿಯವರು ಆಧುನಿಕ ಕವಿಗಳನ್ನು ಪ್ರಕೃತಿಯೊಂದಿಗೆ ಹೇಗೆ ಸಮ್ಮಿಲನಗೊಳಿಸಿದ್ದಾರೆ ?

37. ಹೊರೆಯಾಲ ದೊರೆಸ್ವಾಮಿಯವರು ಎಂಥ ಯುಗಾದಿ ಬರಲೆಂದು ಆಶಿಸಿದ್ದಾರೆ ?

38. ಹಡಗು ಯಾವ ಯಾವ ದೇಶಗಳಲ್ಲಿ ಸಂಚರಿಸುತ್ತದೆ ಎಂದು ಗೋಕಾಕರು ಹೇಳಿದ್ದಾರೆ ?

39. 'ದರ್ಶನ' ಪದ್ಯದಲ್ಲಿ ಕವಿಯನ್ನು ನೋಡಿದ ಹಿರಿಯರಲ್ಲಾದ ಬದಲಾವಣೆಗಳಾವುವು ?

40. ಗಾಂಧೀಜಿಯವರನ್ನು 'ಹಿರಿಯರ ತಂದೆ' ಎಂದು ಏಕೆ ಕರೆಯಲಾಗಿದೆ ?

41. ಕಲಿಗಳ ದೇವ ಭರತನು ಶೋಭಿಸಿದ ಪರಿಯನ್ನು ರತ್ನಾಕರವರ್ಣಿ ಹೇಗೆ ವರ್ಣಿಸಿದ್ದಾರೆ ?

ಈ ಕೆಳಗೆ ಕೊಟ್ಟಿರುವ ಸಾಹಿತಿಗಳ ಸ್ಥಳ ಮತ್ತು ಕಾಲವನ್ನು ವಾಕ್ಯಗಳಲ್ಲಿ ಬರೆಯಿರಿ : 2 × 1 = 2

42. ಯಮುನಾಮೂರ್ತಿ

43. ತೀ.ನಂ ಶ್ರೀಕಂಠಯ್ಯ

44. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಪಂಪ ಮಹಾಚಲ ಜೋಡಿ ಶಿಖರಗಳು

ಧುಮ್ಮಿಕ್ಕುವ ಹರಿಹರನ ಝರಿ

ಅಥವಾ

ಕಣ್ಣು ಕೈಕಾಲ್ ಕಿವಿ ನಾಲಿಗೆ ಇರಲಿಕ್ಕೆ

ಉಣ್ಣದೆ ಉಪವಾಸ ಇರುವರೆ ಖೋಡಿ ॥

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : $4 \times 3 = 12$

45. ''ಹೂಂ ನಿಮ್ಮ ಕೈ ಹಿಡಿದ ಮೇಲೆ ಇನ್ನು ಏನೇನು ಮಾಡಬೇಕೊ ?''

46. ''ತಾನು ಏನು ಅಲ್ವೋ ಅದನ್ನು ಮಾಡೋದೇ ಅಭಿನಯ.''

47. ''ನಿನ್ನ ತವರೂರ ನಾನೇನು ಬಲ್ಲೆನು.''

48. ''ದಾಳಿ ಬಾರದ ಮುನ್ನ ಧರ್ಮವ ಗಳಿಸಿರೊ.''

49. ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ : $1 \times 3 = 3$

— ಹಿತ್ತಲಗಿಡ ಮದ್ದಲ್ಲ

— ತುಂಬಿದ ಕೊಡ ತುಳುಕುವುದಿಲ್ಲ

— ಬೆಳೆಯುವ ಪೈರು ಮೊಳಕೆಯಲ್ಲಿ

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ರಾಮಬಾಡ ಪ್ರದೇಶದ ಕಿರುದಾರಿಯನ್ನು 'ಮಿನಿವಿಶ್ವ' ವೆಂದು ಕರೆದುದು ಏಕೆ ?

— ಎಂ.ಹೆಚ್. ಮರಿಗೌಡರ ಸಾಧನೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

— ಬಿ.ವಿ. ಕಾರಂತರು ನಿರ್ದೇಶಿಸಿದ ನಾಟಕ ಮತ್ತು ಚಲನಚಿತ್ರಗಳನ್ನು ಕುರಿತು ಬರೆಯಿರಿ.

50.

51.

52. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4

— ಶಾಂತಾದೇವಿಯವರು ದೇಹವನ್ನು 'ಅಚ್ಚು ಮುರಿದ ಹಾಳುಬಂಡಿ' ಎಂದು ಕರೆಯಲು ಕಾರಣವೇನು ? ವಿವರಿಸಿ.

— 'ಗಾಂಧೀಜಿಯವರು ಸರ್ವೋದಯದ ಸೂತ್ರಧಾರ' — ಈ ಮಾತಿನ ಹಿನ್ನೆಲೆ ವಿವರಿಸಿ.

53. ಗದಗ ಜಿಲ್ಲೆಯ ರೋಣ ತಾಲೂಕಿನ ಸರ್ವೋದಯ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುಹಾಸ್ / ಸುಶೀಲ ಎಂದು ಭಾವಿಸಿ, ಅನಾರೋಗ್ಯದ ಕಾರಣ ನೀಡಿ ಎರಡು ದಿನಗಳ ರಜಾ ನೀಡುವಂತೆ ಕೋರಿ ನಿಮ್ಮ ಶಾಲಾ ಮುಖ್ಯೋಪಾಧ್ಯಾಯರಿಗೊಂದು ಪತ್ರ ಬರೆಯಿರಿ. $1 \times 5 = 5$

ಅಥವಾ

ಗುಲಬರ್ಗದ ಶರಣಬಸವೇಶ್ವರ ಪ್ರೌಢಶಾಲೆಯಲ್ಲಿ ಓದುತ್ತಿರುವ ಅನುಜ / ಅಂಜುಶ್ರೀ ಎಂದು ಭಾವಿಸಿ ಶೈಕ್ಷಣಿಕ ಪ್ರವಾಸದಲ್ಲಿ ಭಾಗವಹಿಸಲು ರೂ. 2000 ಗಳನ್ನು ಕಳುಹಿಸುವಂತೆ ಮಂಡ್ಯದ ಕುವೆಂಪು ರಸ್ತೆಯಲ್ಲಿ ವಾಸಿಸುತ್ತಿರುವ ನಿಮ್ಮ ತಂದೆಗೊಂದು ಪತ್ರ ಬರೆಯಿರಿ.

54. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಗ್ರಂಥಾಲಯ – ಮನುಷ್ಯನ ಜ್ಞಾನದ ಬಾಗಿಲು
— ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆಗಳ ಪಾತ್ರ
— ವಾಯುಮಾಲಿನ್ಯದ ಕಾರಣಗಳು

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003
**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಏಪ್ರಿಲ್, 2013
**S.S.L.C. EXAMINATION, APRIL, 2013**

ಮಾದರಿ ಉತ್ತರಗಳು
# MODEL ANSWERS

ದಿನಾಂಕ : 05. 04. 2013 ಸಂಕೇತ ಸಂಖ್ಯೆ : **33-K**

Date : 05. 04. 2013 **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ
## Subject : SECOND LANGUAGE — KANNADA

[ ಪರಮಾವಧಿ ಅಂಕಗಳು : 100
[ Max. Marks : 100

| ಪ್ರಶ್ನೆ ಸಂಖ್ಯೆ | ಉತ್ತರದ ಕ್ರಮಾಕ್ಷರ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|---|
| | | ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ. | 15 × 1 = 15 |
| 1. | (ಎ) | ಸಿಂಗ | |
| 2. | (ಬಿ) | ಅರ್ಹತೆ | |
| 3. | (ಎ) | ನಾನು | |
| 4. | (ಸಿ) | ದ್ವಿರುಕ್ತಿ | |
| 5. | (ಡಿ) | ಲೋಪ ಸಂಧಿ | |
| 6. | (ಸಿ) | ಚತುರ್ಥೀ | |
| 7. | (ಬಿ) | ಸುದೈವ | |
| 8. | (ಬಿ) | ಅನುಕರಣಾವ್ಯಯ | |
| 9. | (ಡಿ) | ನಿರ್ದೇಶಕ | |
| 10. | (ಡಿ) | ಉದ್ಧರಣ | |
| 11. | (ಎ) | ಅರಣ್ಯ | |
| 12. | (ಸಿ) | ಆಡುವನು | |
| 13. | (ಬಿ) | ಅವಳೆ | |
| 14. | (ಎ) | ಕಾರ್ಡು | |
| 15. | (ಬಿ) | ಕೋಗಿಲೆಗಳು | |

[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | 'ಮ' ಪಟ್ಟಿಯ ವ್ಯಾಕರಣಾಂಶಗಳಿಗೆ 'ಚ' ಪಟ್ಟಿಯಲ್ಲಿಯ ಸರಿ ಉತ್ತರಗಳು : (ಪ್ರತಿ ಸರಿ ಉತ್ತರಕ್ಕೆ ಒಂದು ಅಂಕದಂತೆ ವಿತರಿಸುವುದು) | 5 × 1 = 5 |
| | i) ಈ) ವಿಮಲಧರ್ಮದ ವಾಣಿ | |
| | ii) ಉ) ಕಬ್ಬಿಣದ ಕಡಲೆ | |
| | iii) ಅ) ಆರು ಸಾಲುಗಳು | |
| | iv) ಆ) ತಿನ್ನು | |
| | v) ಇ) ಕರಗದ | |
| | ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬುವುದು. (ಪ್ರತಿ ಸರಿ ಉತ್ತರಕ್ಕೆ ಒಂದು ಅಂಕದಂತೆ ವಿತರಿಸುವುದು) | 5 × 1 = 5 |
| 17. | ಚಿನ್ನದ ಕೋಲನ್ನು | |
| 18. | ಕಣಿಯರ | |
| 19. | ಇಣಚಿ | |
| 20. | ಸಾವಿನ | |
| 21. | ವಾಯು | |
| | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ. (ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 8 × 1 = 8 |
| 22. | ಕೃಷ್ಣದೇವರಾಯನೊಡನೆ ಪಗಡೆಯಾಟ ಆಡುತ್ತಿದ್ದವರು ಮಂತ್ರಿ ತಿಮ್ಮರಸ. | |
| 23. | ಹಿಂದಿ ಉಪಭಾಷೆ ಬುಂದೇಲಿಯಲ್ಲಿ ಪ್ರಯೋಗವಾದ ನಾಟಕ ಮಾಳವಿಕಾಗ್ನಿ ಮಿತ್ರ. | |
| 24. | ತಗಡೂರು ರಾಮಚಂದ್ರರಾಯರ ಉಡುಪು ರಾಷ್ಟ್ರಧ್ವಜವನ್ನು ಪ್ರತಿನಿಧಿಸುತ್ತಿದ್ದಿತು. | |
| 25. | ಕಾಡುಮಿಕಗಳು ನೀರು ಕುಡಿಯಲು ಹಳ್ಳದ ಬಳಿ ಬಂದವು. | |
| 26. | ಗಂಡ ಹೆಂಡತಿ ಮಕ್ಕಳು ತಿರುಪತಿಗೆ ಹೋದರೆಂದು ಮೊಗಸಾಲೆಯವರು ಹೇಳಿದ್ದಾರೆ. | |
| 27. | ಹಡಗವು ನೂರು ಭಾಷೆಗಳ ನವಖಂಡ. | |
| 28. | ಚನ್ನ ಶ್ರೀಪುರಂದರ ವಿಠಲರಾಯನ್ನ ಏಕೋಭಾವದಿಂದ ಭಜಿಸಬೇಕೆಂದು ಪುರಂದರದಾಸರು ತಿಳಿಸಿದ್ದಾರೆ. | |

| | | |
|---|---|---|
| 29. | ಭರತ ಭೂತಳಕ್ಕೆ ಸಿಂಗಾರವಾದದ್ದು ಅಯೋಧ್ಯಾ ನಗರ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯುವುದು. | 12 × 2 = 24 |
| 30. | ''ನಿನಗಾಗಿ ನನ್ನ ಕೈಲಾದ ಸಹಾಯ ಮಾಡುತ್ತೇನೆಂದು'' ಹೇಳಿ, ಮೋಡಗಳನ್ನೆಲ್ಲ ಕರಗಿಸಿ ಕತ್ತಲೆಯನ್ನೆಲ್ಲ ಸುಟ್ಟು ಬೂದಿ ಮಾಡಿದ. | |
| 31. | ಪೂರ್ಣಿಮಾಳ ಕೆಲಸನೆಂದರೆ ಹೊತ್ತಿಗೆ 60 ರಿಂದ 80 ರೊಟ್ಟಿ ಬಡಿಯುವುದು. ರಾತ್ರಿ ಮಲಗಿದಾಗಲೂ ಅವಳ ಕೈಗಳು ಮುಂದುವರೆಸುತ್ತಿದ್ದವು. ನಿದ್ದೆಗಣ್ಣಿನಲ್ಲಿ ಗಂಡನ ಬೆನ್ನ ಮೇಲೆ ಬಡಿಯುತ್ತಿದ್ದ ಕಾರಣ ನೀಲಿಗಟ್ಟಿತು. | |
| 32. | ತಗಡೂರು ರಾಮಚಂದ್ರರಾಯರು ತಮಗೆ ಎಂತಹ ಹೆಂಡತಿ ಬೇಕೆಂಬುದನ್ನು ಪತ್ರಿಕೆಗಳಲ್ಲಿ ಜಾಹೀರು ಮಾಡಿ ಒಪ್ಪಿಗೆಯಾದ ಹೆಣ್ಣನ್ನು ಸರಳ ಸಮಾರಂಭದಲ್ಲಿ ಕೈಹಿಡಿದರು ಸಂಸಾರದಲ್ಲಿದ್ದರೂ. ಒಂದು ರೀತಿಯಲ್ಲಿ ಅನಾಸಕ್ತರಾಗಿದ್ದರು ಪತ್ನಿ ವಿಯೋಗವನ್ನು ಪ್ರಕೃತಿ ನಿಯಮವೆಂಬಂತೆ ಸಹಿಸಿಕೊಂಡಿದ್ದರು. | |
| 33. | ರಾಳೆಗಾಮ್ಸ್ ಸಿದ್ಧಿ, ರಾಜಸ್ಥಾನ ಮೊದಲಾದೆಡೆ ತುಂಬಾ ಪ್ರಯೋಜನ ಪಡೆದಿದ್ದಾರೆ. ರಾಜಸ್ಥಾನದಂತಹ ಮರಳುಗಾಡಿನಲ್ಲಿ ಮಳೆಗಾಲಾನಂತರ ಕೆಲವೇ ತಿಂಗಳು ಹರಿಯುತ್ತಿದ್ದ ಐದು ನದಿಗಳನ್ನು ವರ್ಷವಿಡೀ ಹರಿಯುವಂತೆ ಮಾಡಿದ್ದಾರೆಂದು ಶೇಖರ ತನ್ನ ತಂದೆಗೆ ಹೇಳಿದನು. | |
| 34. | ಅರಣ್ಯನಾಶ, ನೀರಿನ ಪೋಲು, ಅತಿಯಾದ ಕೊಳವೆ ಬಾವಿ ಕೊರೆತ, ನಗರಗಳಲ್ಲಿ ಕಾಂಕ್ರೀಟೀಕರಣ – ಇವೆಲ್ಲದರಿಂದಾಗಿ ಬಿದ್ದ ಮಳೆನೀರು ಭೂಮಿಯೊಳಕ್ಕೆ ಇಂಗುವುದು ಕಡಿಮೆಯಾಗುತ್ತಿದೆ. | |
| 35. | ಶಾಸ್ತ್ರಿಗಳ ಸೊಸೆಯ ಕಾಲುತಾಗಿ ಕೊಡ ಉರುಳಿ ಅಗ್ನಿದೇವರು ಶಾಂತರಾಗಿ, ದೇವರು ಜಲಸಮಾಧಿ ಹೊಂದಿದರು. ಪೂಜೆಯೂ ಆಗಿತ್ತು. ಅಡಿಗೆಯೂ ತೀರುತ್ತ ಬಂದಿತ್ತು. ಊಟಕ್ಕೆ ಕೂತ ಕಾಲಕ್ಕೆ ಕಳ್ಳ ಬಂದಂತೆ ಈ ಅನಾಹುತವಾಗಿ, ಶಾಸ್ತ್ರಿಗಳ ಮುಖದಲ್ಲಿ ಬೆಂಕಿ ಕಾಣದಿದ್ದರೂ ಹೊಗೆ ಮುಸುಕಿತು. | |
| 36. | ಕುವೆಂಪುರವರನ್ನು ಸಹ್ಯಾದ್ರಿಯ ಮಲೆಯ ಸೊಬಗಿಗೂ, ಬೇಂದ್ರೆಯವರನ್ನು ಧಾರವಾಡ ಸೀಮೆಯ ನಿಸರ್ಗದ ಹೊಳಪಿಗೂ, ಕಾರಂತರನ್ನು ಕಡಲ ತೀರಕ್ಕೂ, ಅಡಿಗರನ್ನು ಮಲೆಘಟ್ಟದ ಕುದಿಗಡಲಿಗೂ, ಕೆ.ಎಸ್.ನ. ರನ್ನು ಇರುಳನ್ನು ಓಡಿಸುವ ಹಣತೆಗೂ ಹೋಲಿಸಿ ಸಮ್ಮಿಲನಗೊಳಿಸಲಾಗಿದೆ. | |
| 37. | ಬದುಕಿನಲ್ಲಿ ಆನಂದ, ಹರ್ಷ, ನೆಮ್ಮದಿ, ತೃಪ್ತಿ, ಸಂಭ್ರಮ, ಸಡಗರಗಳನ್ನು ತರುವ, ಕೆಂಪು, ಹಳದಿ, ನೀಲಿ ಬಣ್ಣಗಳ ಹೂಗಳನ್ನು ನೋಡುತ್ತ ನಲಿದಾಡುವ, ಪುಳಕಗೊಳ್ಳುವ ಯುಗಾದಿ ಬರಲೆಂದು ಕವಿ ಆಶಿಸಿದ್ದಾರೆ. | |
| 38. | ಹಡಗು ನಾನಾದೇಶಗಳಲ್ಲಿ ಸಂಚರಿಸುತ್ತದೆ. ಇಂದು ಭಾರತ, ನಾಳೆ ಅರಬ್ಬಿದೇಶ. ಒಂದು ದಿನ ಈಜಿಪ್ಟ್, ಮರುದಿನ ಯುರೋಪ್. | |
| 39. | ಕವಿ ತಿಮ್ಮಪ್ಪ ದೇವರ ದರ್ಶನಕ್ಕಾಗಿ ಸರತಿಯಲ್ಲಿ ನಿಂತಿದ್ದಾಗ, ಜೊತೆಯಲ್ಲಿ ಹಿರಿಯರೊಬ್ಬರು ನಿಂತಿದ್ದರು. ಅವರು ಕವಿಯೊಂದಿಗೆ ಮಾತನಾಡಲು ಬಯಸಿ, ತಮ್ಮ ಪರಿಚಯ ಮಾಡಿಕೊಂಡರು. ತಮ್ಮ ಕೋಣೆಗೆ ಆಹ್ವಾನಿಸಿ ಸತ್ಕರಿಸಿದರು. | |

[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 40. | ಗಾಂಧೀಜಿಯವರು ಸಮಾಜದಲ್ಲಿ ನಿಕೃಷ್ಟರಾಗಿದ್ದವರು ಹಾಗೂ ಬ್ರಿಟೀಷರ ಆಳ್ವಿಕೆಯಲ್ಲಿ ಹೇಡಿಗಳಾಗಿದ್ದ ಭಾರತೀಯರನ್ನು ಮೇಲಕ್ಕೆತ್ತಿದರು. ಅವರಲ್ಲಿ ದೃಢ ಮನಸ್ಸನ್ನು ಉಂಟು ಮಾಡಿದರು. ಭಾರತೀಯರನ್ನು ವೀರರನ್ನಾಗಿ ಪರಿವರ್ತಿಸಿದರು. | |
| 41. | ಭರತೇಶನ ಸಿಂಹಾಸನವು ನವರತ್ನ ಮತ್ತು ಚಿನ್ನದಿಂದ ನಿರ್ಮಿತವಾಗಿತ್ತು. ಅಲ್ಲಿ ದೇವೇಂದ್ರ ಶೋಭಿಸುವಂತೆ ಶೋಭಿಸುತ್ತಿದ್ದನು. ದೇಹ ಕಾಂತಿಯಿಂದ ಪ್ರಜ್ವಲಿಸುತ್ತಿದ್ದು, ಉದಯಗಿರಿಯ ನೆತ್ತಿಯ ಮೇಲೆ ಮೆರೆವ ಸೂರ್ಯನಿಗೆ ಎದುರಾದ ಪ್ರತಿ ಸೂರ್ಯನಂತೆ ಕಾಣುತ್ತಿದ್ದನು. | |
| | ಸಾಹಿತಿಗಳ ಸ್ಥಳ ಮತ್ತು ಕಾಲ : (ಪ್ರತಿ ಸರಿ ಉತ್ತರಕ್ಕೆ 2 ಅಂಕಗಳು) | 2 × 1 = 2 |
| 42. | ಯಮುನಾಮೂರ್ತಿಯವರು 1933 ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. | |
| 43. | ತೀ.ನಂ. ಶ್ರೀಕಂಠಯ್ಯನವರು 1906 ರಲ್ಲಿ ತೀರ್ಥಪುರದಲ್ಲಿ ಜನಿಸಿದರು. | |
| 44. | ಪದ್ಯ ಭಾಗ ಪೂರ್ಣ ಮಾಡುವಿಕೆ :<br>ರನ್ನನ ಉನ್ನತ ಧವಳಗಿರಿ<br>ಶಿವಶರಣರ ವಿಸ್ತಾರದ ಬಯಲು<br>ಅಥವಾ<br>ಮಣ್ಣು ಮುಕ್ಕಿ ಮರುಳಾಗುವರೆ<br>ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತ | 1 × 4 = 4 |
| | ಸಂದರ್ಭಸಹಿತ ವಿವರಣೆ : | 4 × 3 = 12 |
| | ಕೃತಿ-ಕರ್ತೃ | 1 ಅಂಕ |
| | ಯಾರು ಯಾರಿಗೆ | 1 ಅಂಕ |
| | ಸಂದರ್ಭ ವಿವರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 45. | ಲೇಖಕರು : ಡಾ॥ ಎಚ್.ಕೆ. ರಾಮನಾಥರು<br>ಗದ್ಯಪಾಠ : ಮತ್ತೆ ಬದುಕಿರಿ<br>ಸಂದರ್ಭ : ಗೌರಿಯು ರಾಮಕೃಷ್ಣನಿಗೆ ಹೇಳಿದ ಮಾತು.<br>ಹಸಿವನ್ನು ನಿವಾರಿಸಿಕೊಳ್ಳುವ ಸಮಯದಲ್ಲಿ ಬಂದ ವಿಷಯ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 46. | ಲೇಖಕರು : ಹಾ.ಸಾ. ಕೃಷ್ಣಮೂರ್ತಿ<br>ಗದ್ಯಪಾಠ : ಬಹುಮುಖ ರಂಗಪ್ರತಿಭೆಯ ಬಿ.ವಿ. ಕಾರಂತ<br>ಸಂದರ್ಭ : ನರಹರಿಶಾಸ್ತ್ರಿಗಳು ಕಾರಂತರಿಗೆ ಹೇಳಿದ ಮಾತು.<br>ಪುರುಷರು ಸ್ತ್ರೀ ಪಾತ್ರ ಮಾಡುವುದೆಂದರೇನು ? ಎಂದು ಬೇಸರಪಟ್ಟುಕೊಂಡಾಗ ಲೇಖಕರು ಸಮಾಧಾನಪಡಿಸಿದ ಮಾತು. | |
| 47. | ಪದ್ಯಪಾಠ : ಭಾಗ್ಯದ ಬಳೆಗಾರ<br>ಗ್ರಂಥ ಸಂಪಾದನೆ : ಶ್ರೀಮತಿ ಎನ್. ಪ್ರಭಾ<br>ಸಂದರ್ಭ : ಬಳೆಗಾರನು ಬಾಲೆಗೆ ಕೇಳಿದ್ದು<br>ತನ್ನ ತವರಿಗೆ ಹೋಗಿ, ತನ್ನ ತಾಯಿಗೆ ಬಳೆ ತೊಡಿಸಿ ಬಾ ಎಂದು ಹೆಣ್ಣುಮಗಳು ಹೇಳಿದಾಗ, ಬಳೆಗಾರನ ಮಾತಿದು. | |
| 48. | ಕರ್ತೃ : ಪುರಂದರದಾಸರು<br>ಪದ್ಯಪಾಠ : ಮಾನವ ಜನ್ಮ ದೊಡ್ಡದು<br>ಸಂದರ್ಭ : ದಾಸರು ಮಾನವ ಸಮುದಾಕ್ಕೆ ಹೇಳಿದ್ದಾರೆ.<br>ಯಮಕಿಂಕರರು ನಮ್ಮ ಪ್ರಾಣವನ್ನು ಎಳೆದೊಯ್ಯುವಾಗ ತಾಳಿರೆಂದರೆ ತಾಳುವುದಿಲ್ಲ ದಾಳಿಬಾರದ ಮುನ್ನ ಧರ್ಮದ ಗಳಿಸಿರಿ ಎಂದಿದ್ದಾರೆ. | |
| 49. | ಗಾದೆ ಮಾತಿನ ವಿಸ್ತರಣೆ : (ಯಾವುದಾದರೂ ಒಂದಕ್ಕೆ ಮಾತ್ರ) | $1 \times 3 = 3$ |
| | ಗಾದೆಯ ಮಹತ್ವ ಮತ್ತು ಅರ್ಥ | 1 ಅಂಕ |
| | ಉದಾಹರಣೆಯೊಂದಿಗೆ ಸಮರ್ಥನೆ | 2 ಅಂಕಗಳು |
| | ಒಟ್ಟು | 3 ಅಂಕಗಳು |
| 50. ಮತ್ತು 51. | ಐದಾರು ವಾಕ್ಯಗಳಿಗೆ ಮೀರದಂತೆ ಉತ್ತರಗಳು : (ಯಾವುದಾದರೂ ಎರಡಕ್ಕೆ ಮಾತ್ರ) | $2 \times 4 = 8$ |
| | ಮೌಲ್ಯಾಂಶಗಳಿಗೆ | 3 ಅಂಕಗಳು |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | — ರಾಮಬಾಡದಿಂದ ಕೇದಾರಕ್ಕೆ ಹೋಗುವ ದಾರಿ ಅತ್ಯಂತ ಕಿರಿದು. ಮೇಲಿನಿಂದ ಬರುವವರು, ಕೆಳಗಿನಿಂದ ಏರುವವರು, ಕುದುರೆಗಳು ದಂಡಿ ಕಂಡಿಯವರು ಇವರೆಲ್ಲರ ಮಧ್ಯ ನುಸುಳಿ ಹೋಗುವುದು ಹರಸಾಹಸ. ಮುದುಕರು, ಯುವಕರು, ವಿದೇಶಿಯರು ಹೀಗೆ ಹಲವಾರು ರೀತಿಯ ಜನರನ್ನು, ಅವರ ವಿವಿಧ ವೇಷಭಾಷೆಗಳನ್ನು ಕಂಡಾಗ ಮಿನಿ ವಿಶ್ವವನ್ನೇ ಕಂಡಂತಾಗುವುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ರಾಷ್ಟ್ರದ ಬಂಜರು ಭೂಮಿಯ ಸಾಗುವಳಿ ಅಗತ್ಯವೆಂಬುದನ್ನು ಮೊತ್ತ ಮೊದಲಿಗೆ ಪ್ರಾಯೋಗಿಕವಾಗಿ ಮರಿಗೌಡರು ತೋರಿಸಿಕೊಟ್ಟರು. ರೈತರ ಕ್ಷೇಮದ ಬಗ್ಗೆ ಕಳಕಳಿ ಹೊಂದಿದ್ದರು. ಆರ್ಥಿಕ ಪ್ರಗತಿಗೆ, ವಾಣಿಜ್ಯಾಭಿವೃದ್ಧಿಗೆ ಅಂತರರಾಷ್ಟ್ರೀಯ ಬಾಂಧವ್ಯಕ್ಕೆ ತೋಟಗಾರಿಕೆ ಬೆಳೆಗಳು ಹೊಸ ದಾಖಲೆಯನ್ನು ನಿರ್ಮಿಸಬೇಕೆಂಬುದು ಇವರ ಹೇರಾಸೆಯಾಗಿತ್ತು. ಕಾರಂತರು ಅನೇಕ ನಾಟಕಗಳು ಮತ್ತು ಚಲನಚಿತ್ರಗಳಿಗೆ ನಿರ್ದೇಶನ ಮಾಡಿದ್ದಾರೆ. ಕುವೆಂಪು ಅವರ 'ಕಿಂದರಿ ಜೋಗಿ' ಭೂಪಾಲಿನಲ್ಲಿ 'ಘಾಸೀರಾಮ್ ಕೊತ್ವಾಲ್', ಮಾಲವಿಕಾಗ್ನಿಮಿತ್ರ, ಹಯವದನ, ಕರ್ನಾಟಕದಲ್ಲಿ ಗೋವಿನಹಾಡು, ಕಿಂದರಿಜೋಗಿ, ಚಂದ್ರಹಾಸ ಇತ್ಯಾದಿ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಮಕ್ಕಳ ರಂಗಭೂಮಿಗೂ ಶ್ರಮಿಸಿದ್ದಾರೆ. ಒಟ್ಟು 104 ನಾಟಕಗಳನ್ನು ನಿರ್ದೇಶಿಸಿದ್ದಾರೆ. ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ, ಜೋಮನದುಡಿ ಮೊದಲಾದ ಚಲನಚಿತ್ರಗಳನ್ನೂ ನಿರ್ದೇಶಿಸಿದ್ದಾರೆ. | |
| 52. | ಯಾವುದಾದರೂ ಒಂದಕ್ಕೆ ಐದಾರು ವಾಕ್ಯಗಳಲ್ಲಿ ಉತ್ತರ : | 1 × 4 = 4 |
| | ಮೌಲ್ಯಾಂಶಗಳಿಗೆ | 3 ಅಂಕಗಳು |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 4ಅಂಕಗಳು |
| | — ಈ ಜಗತ್ತು ಒಂದು ಬಂಡಿಯಿದ್ದಂತೆ ಇದನ್ನು ನಡೆಸುವವನು ನೀನೊಬ್ಬನೆ. ಆದರೆ ಈ ದೇಹವೆಂಬ ಬಂಡಿಯನ್ನು ನಡೆಸಲು ಪಂಚೇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮಗಳು ನಾ ಮುಂದೆ ತಾ ಮುಂದೆ ಎನ್ನುತ್ತಿವೆ. ಆದರೆ ಈ ದೇಹವೆಂಬ ಬಂಡಿಯ ಒಡೆಯ ನೀನಾದ ಕಾರಣ ಇದನ್ನು ಸರಿಯಾಗಿ ನಡೆಸಬೇಕಾದವನು ನೀನೇ ಇಲ್ಲವಾದರೆ ಈ ಬಂಡಿ ಅಚ್ಚು ಮುರಿದ ಹಾಳು ಬಂಡಿಯಂತಾಗುತ್ತದೆ ಎಂದು ಶಾಂತಾದೇವಿ ಹೇಳಿದ್ದಾರೆ. | |
| | **ಅಥವಾ** | |
| | — ತಮ್ಮ ಕೊನೆಯ ಉಸಿರಿರುವ ತನಕ ಗಾಂಧೀಜಿಯವರು ಇಳೆಗೆ ಅಹಿಂಸೆಯ ಪರಮತತ್ವವನ್ನೇ ಬೋಧಿಸಿದರು. ಬ್ರಿಟಿಷರ ದರ್ಪವನ್ನು ಧೈರ್ಯದಿಂದ, ಶಸ್ತ್ರವನ್ನು ಸಹನೆಯಿಂದ, ಅವರ ಮೂರ್ಖತನವನ್ನು ತಮ್ಮ ಸತ್ಯದಿಂದ ಗೆದ್ದು ವೀರರಾದರು. ಭಾರತೀಯರ ಹೃದಯದಲ್ಲಿ ಧೈರ್ಯ, ಸಾಹಸ, ದೃಢಮನಸ್ಸನ್ನು ತುಂಬಿ, ಜಾಗೃತಗೊಳಿಸಿದರು. ವಿಶ್ವದಲ್ಲಿ ಪ್ರೇಮ ತತ್ವವನ್ನು ಸ್ಥಾಪಿಸಲು ತಮ್ಮನ್ನೇ ತಾವು ಆಹುತಿ ಮಾಡಿಕೊಂಡು ದಾನಿ ಎನಿಸಿದರು. ಭಾರತೀಯರಿಗೆ ಭಾಗ್ಯರವಿ, ದೀನದಲಿತರಿಗೆ ರಕ್ಷೆಯಾಗಿ, ಸರ್ವೋದಯದ ಸೂತ್ರರಾದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 53. | ಪತ್ರ ಲೇಖನ (ಒಂದಕ್ಕೆ ಮಾತ್ರ) : | 1 × 5 = 5 |
| | ಇಂದ ವಿಳಾಸ, ಗೆ ವಿಳಾಸ, ಪ್ರಾರಂಭದ ಒಕ್ಕಣೆ | 1 ಅಂಕ |
| | ವಿಷಯ, ಪತ್ರದ ಒಡಲು | 2 ಅಂಕಗಳು |
| | ಮುಕ್ತಾಯ ಸಹಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | ಅಥವಾ | |
| | ಶೈಕ್ಷಣಿಕ ಪ್ರವಾಸ : ಸ್ಥಳ, ದಿನಾಂಕ, ಇಂದ, ವಿಳಾಸ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| 54. | ಪ್ರಬಂಧ ಲೇಖನ (ಒಂದಕ್ಕೆ ಮಾತ್ರ) | 1 × 5 = 5 |
| | ಪೀಠಿಕೆ 1 ಅಂಕ | |
| | ವಿಷಯ ಬೆಳವಣಿಗೆ | 2 ಅಂಕಗಳು |
| | ಮುಕ್ತಾಯ 1 ಅಂಕ | |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |